ಶ್ರೀ ಎಚ್. ಸಿದ್ದವೀರಪ್ಪ.—ಮಾಡಿದ್ದಾರೆ. I would humbly request the Hon'ble Member not to proceed further on that question.

ಶ್ರೀ ಎಸ್. ಸಿದ್ದಪ್ಪ.—ಕಳೆದ 10 ವರ್ಷಗಳಿಂದಲೂ ಇದೇ ರೀತಿ ನಂಸ್ಥಾನಾದ್ಯಂತವೂ ಆಡಿಟ್ ಆಗದೆ ಇರುವ ಡಿಪೋಗಳಲ್ಲಿ ಎಷ್ಟೆಷ್ಟು ಅನ್ಯಾಯಗಳು ನಡೆದಿವೆ, ಅಂಥ ಸಂದರ್ಭಗಳಲ್ಲಿ ಎಷ್ಟೆಷ್ಟು ಮೊಬಲಗನ್ನು ವಸೂಲ್ಮಾಡಲಾಗಿದೆ ಎಂಬುದನ್ನು ತಿಳಿಸಲಕ್ಕೆ ಸಾಧ್ಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಈ ಪ್ರಶ್ನೆ ಉದ್ಭವಿಸುವುದಕ್ಕೆ ಕಾರಣವೇ ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ತಮಗೆ ಸಂಸ್ಥಾನದ ಇತರ ಕಡೆಗಳಿಂದ ಇಂಥ ದೂರುಗಳು ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿರುತ್ತವೆ.

ಶ್ರೀ ಎಸ್. ಸಿದ್ದಪ್ಪ.— ಈ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ಮೇಲೆ ಅಂಥ ಫಿರ್ಯಾದುಗಳು ಎಷ್ಟು ಬಂದಿವೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಅಂಕಿ ಅಂಶಗಳ ವಿವರ ಈಗ ಸದ್ಯಕ್ಕೆ ನನ್ನಲ್ಲಿರುವುದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ಇಲಾಖೆಗೆ ಕೆಲಸಕ್ಕೆ ಯಾರನ್ನು ನೇಮಿಸಿಕೊಳ್ಳಲಾಗುತ್ತದೆಯೋ ಅಂಥವರಿಂದ ಡಿಪಾಸಿಟ್ ಮೊಬಲಗನ್ನು ತೆಗೆದುಕೊಳ್ಳುವ ಪದ್ಧತಿ ಇಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದೆ.

ಶ್ರೀ ಎಸ್. ಸಿದ್ದಪ್ಪ.—ಅಂಥ ಭದ್ರತೆಯನ್ನು ಈಗ ಬಂದಿರತಕ್ಕ ಸಂದರ್ಭಗಳಲ್ಲಿ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗೆ 26 ಸಾವಿರ ಕಮ್ಮಿ ಆಗಿದೆಯೆಂದು ಅವರು ಸರ್ಕಾರಕ್ಕೆ ತಿಳಿಸಿದ್ದು ಯಾವಾಗ ?

ಶ್ರೀ ಎಚ್. ಸಿದ್ದವೀರಪ್ಪ.—ಆ ತಾರೀಖ್‌ವಾರ್ ಅಂಕಿ ಅಂಶಗಳು ನನ್ನಲ್ಲಿ ಈಗ ಹಾಜರಿರುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—26 ಸಾವಿರ ರೂಪಾಯಿಗಳು ಹೀಗೆ ಕಡಮೆಆಯಿತೆಂದು ತಮ್ಮ ಗಮನಕ್ಕೆ ಬಂದಿದ್ದು ಯಾವಾಗ ?

Sri H. SIDDAVEERAPPA.—I have called for that information. I have not yet got it.

ಶ್ರೀ ಕೆ. ಪಂಚಾಕ್ಷರಯ್ಯ.—ಇಂಥ ವಿವರವೆಂಬುದು ತಮಗೆ ಗೊತ್ತಿಲ್ಲದಿದ್ದರೂ, ಅಂದಾಜಿನಮೇರೆ ಇಂಥ ವರ್ಷ, ಇಂಥ ತಿಂಗಳು ಎಂಬುದನ್ನು ತಿಳಿಸಲು ಸಾಧ್ಯವಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ನನಗೆ ಅಷ್ಟು ಜ್ಞಾಪಕವಿಲ್ಲ. ಅದು ನನಗೆ ಸರಿಯಾಗಿ ಗೊತ್ತಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ಬಗ್ಗೆ ಸರ್ಕಾರದವರು ಇಷ್ಟು ಉದಾಸೀನ ಮಾಡಬಹುದೆ ?

ಶ್ರೀ ಎಚ್. ಸಿದ್ದವೀರಪ್ಪ.—ನಾವೇನೂ ಉದಾಸೀನ ಮಾಡಿರುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ದಿನ, ತಿಂಗಳುಗಳು ಗೊತ್ತಿಲ್ಲದೆ ಇದ್ದರೂ ಇಂಥ ವರ್ಷ ಎಂಬುದೇ ಗೊತ್ತಿಲ್ಲ ವೆಂದು ಹೇಳುವುದು ಉದಾಸೀನತೆಯನ್ನು ತೋರಿಸುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಯಾವಯಾವ ಆಫೀಸರು ಇದಕ್ಕೆ ಸಂಬಂಧಪಟ್ಟವರಾರೋ ಅವರ ವೇತನಲೆಲ್ಲಾ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಾಗಲೇ ಕೈಕೊಳ್ಳಲಾಗಿದೆಯೆಂದು ಉತ್ತರದಲ್ಲೇ ತಿಳಿಸಿದೆ.

ಶ್ರೀ ಜಿ. ಬಸಪ್ಪ.—ಈ 2,556 ಚಿಲ್ಲರೆ ರೂಪಾಯಿಗಳನ್ನು ತಾವು ಯಾರಿಂದ ವಸೂಲ್ಮಾಡಿದ್ದೀರಿ ?

ಶ್ರೀ ಎಸ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಟಿ. ಹನುಮಯ್ಯ.—ಈ ಪ್ರಶ್ನೆಯನ್ನು ಸದಸ್ಯರು ಕಳುಹಿಸಿಕೊಟ್ಟಮೇಲೆ ತಾನೆ ತಾವು ಈ ಉತ್ತರಗಳನ್ನು ಆ ಸಂಬಂಧಪಟ್ಟ ಇಲಾಖೆಯವರಿಂದ ತರಿಸಿರುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರ ಸರ್ಕಾರಕ್ಕೆ ಇನ್ನೂ ಮುಂಚಿತವಾಗಿಯೇ ಗೊತ್ತಿತ್ತು.

Irrigation wells sanctioned under the Grow More Food Scheme.

Q.—677. Sri D. M. GOVINDARAJU (Nelamangala).—

Will the Government be pleased to state :—

(*a*) (i) the number of irrigation wells sanctioned under the Grow More Food Scheme in the State ;

(ii) the amount spent on them up to this date (talukwar details to be furnished) ;

(*b*) (i) the number of wells, the work in respect of which is completed ;

(ii) the number of wells, the work in respect of which is incomplete ;

(iii) the amount of grant now given for each well ;

(*c*) the minimum extent of land prescribed if such a grant has to be given ?

A.—Sri H. SIDDAVEERAPPA (Minister for Home and Industries).—

(*a*) (i) 2,617 (from 1949-50 to 1951-52).

(ii) Rs. 14,80,349-5-8 from 1949-50 to 1951-52 is the subsidy sanctioned. Talukwar information

(SRI H. SIDDAVEERAPPA.)

is not readily available. Statement showing Districtwar details appended below.

(*b*) (i) 2,617 (from 1949-50 to 1951-52).

(ii) 3,044 wells (at the end of the year 1951-52).

(iii) Subsidy of Rs. 250 per well.

(*c*) Two acres.

[*Vide* REPLY TO CLAUSE (*a*).]

Statement showing the details of Irrigation Wells dug during the years 1949-50, 1950-51 and 1951-52.

District	1949-50		1950-51		1951-52	
	No. of wells	*Subsidy*	*No. of wells*	*Subsidy*	*No. of wells*	*Subsidy*
		Rs. a. p.		Rs. a. p.		Rs. a. p.
Bangalore ..	86	58,367 8 0	85	57,070 0 0	67	47,550 0 0
Mysore ..	26	27,549 0 0	32	22,850 0 0	9	14,850 0 0
Tumkur ..	176	63,130 0 0	109	47,710 0 0	150	42,264 0 0
Kolar ..	403	3,49,291 8 0	527	1,84,531 0 0	403	2,06,682 3 0
Shimoga ..	6	5,637 8 0	7	6,450 0 0	27	7,760 0 0
Mandya ..	42	28,381 10 0	18	9,741 8 0	22	6,700 0 0
Chitaldrug ..	104	1,34,914 12 0	126	99,438 4 0	143	40,085 0 0
Chikmagalur ..	8	350 0 0	..	350 0 0	..	650 0 0
Hassan ..	21	..	..	13,255 0 0	20	4,950 0 0
Total ..	872	6,66,971 14 0	904	4,41,395 12 0	841	3,71,491 3 0

ಶ್ರೀ ಡಿ. ಎಂ. ಗೋವಿಂದರಾಜು.—ಬಾವಿ ಒಂದಕ್ಕೆ 250 ರೂಪಾಯಿಗಳ ದ್ರವ್ಯಸಹಾಯ ಕೊಡುವುದಕ್ಕಿಂತ ಹಿಂದೆ ತಾವು ಈ ಸಬ್‌ಸಿಡಿ ಬಗ್ಗೆ ಕೊಡುತ್ತಿದ್ದ ಮೊಬಲಗೆಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಮೊದಲು ಸ್ವಲ್ಪ ದಿವಸ ಒಂದು ಬಾವಿಗೆ ಒಂದು ಸಾವಿರ ರೂಪಾಯಿಗಳಂತೆ ಸಬ್‌ಸಿಡಿಯನ್ನು ಕೊಡಲಾಗುತ್ತಿತ್ತು. ಅನಂತರ ಅದನ್ನು 500 ರೂಪಾಯಿಗಳಿಗೆ ಇಳಿಸಲಾಯಿತು. ಈಗ 250 ರೂಪಾಯಿಗಳ ಪ್ರಕಾರ ಕೊಡಲಾಗುತ್ತಿದೆ. ಆದರೆ ಈಗಲೂ ಬಾವಿಯೊಂದಕ್ಕೆ 500 ರೂಪಾಯಿಗಳ ಪ್ರಕಾರವೇ ಕೊಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿಕೊಂಡಿದ್ದೇವೆ

ಶ್ರೀ ಡಿ. ಎಂ. ಗೋವಿಂದರಾಜು.—ತಾವು ಸಬ್‌ಸಿಡಿ ಕೊಡತಕ್ಕ ಜಮೀನಿನಲ್ಲಿ ಅವರು ಕಡ್ಡಾಯವಾಗಿ ಆಹಾರಧಾನ್ಯಗಳನ್ನೇ ಬೆಳೆಯಬೇಕೆಂಬ ನಿಯಮಕ್ಕೆ ವಿರುದ್ಧವಾಗಿ ಕಮರ್ಷಿಯಲ್ ಕ್ರಾಪುಗಳನ್ನು ಬೆಳೆದರೆ ಆಗ ತಾವು ಈ ಸಬ್‌ಸಿಡಿ ಮೊಬಲಗನ್ನು ಸರ್ಕಾರಕ್ಕೆ ವಾಪಸ್ಸು ಕೊಡಬೇಕಾಗುತ್ತದೆಂದು ನಿಗದಿಯೇನಾದರೂ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆಹಾರ ಧಾನ್ಯಗಳನ್ನೇ ಬೆಳೆಯಬೇಕೆಂದು ಕಡ್ಡಾಯಮಾಡಿದ್ದೇವೆ. ಅದಕ್ಕೆ ತಪ್ಪಿದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಪೂರ್ತಿ ಪ್ರದೇಶದಲ್ಲಿಯೂ ಈ ಆಹಾರಧಾನ್ಯಗಳೊಂದನ್ನೇ ಬೆಳೆಯಬೇಕೋ ಅಥವಾ ಒಂದುಕಡೆ ಅಲಾಯಿದ ಕಮರ್ಷಿಯಲ್ ಬೆಳೆಯನ್ನೂ ಬೆಳೆದುಕೊಳ್ಳಬಹುದೋ ?

ಅಧ್ಯಕ್ಷರು.—ಆಹಾರ ಧಾನ್ಯಗಳನ್ನೇ ಬೆಳೆಯಬೇಕೆಂದು ಆಗಲೇ ತಿಳಿಸಿದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗೆ ಈ ಪುಡ್ ಕ್ರಾಪ್ಸ್‌ಗಳನ್ನು ಎಷ್ಟು ವರ್ಷಗಳವರೆಗೆ ಬೆಳೆಯಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಕೊಡುತ್ತಿರುವುದು ಜಿ. ಎಂ. ಎಫ್. ಯೋಜನೆಯಲ್ಲಿ. ಆದುದರಿಂದ ಯಾವಾಗಲೂ ಆಹಾರಧಾನ್ಯಗಳನ್ನೇ ಬೆಳೆಯಬೇಕು.

ಶ್ರೀ ಡಿ. ಎಂ. ಗೋವಿಂದರಾಜು.—ಈ ಬಗ್ಗೆ ತಾವು ಸಾಲವಾಗಿ ಹಣವನ್ನೇನಾದರೂ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಡಲಾಗುತ್ತದೆ.

ಶ್ರೀ ಡಿ. ಎಂ. ಗೋವಿಂದರಾಜು.—ಎಷ್ಟರತನಕ ಹಾಗೆ ಕೊಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಸುಮಾರು 750 ರೂಪಾಯಿಗಳವರೆಗೂ ಕೊಡಬಹುದೆಂದಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗೆ ಇಲ್ಲಿಯ ತನಕ ಬೆಂಗಳೂರು ಜಿಲ್ಲೆಯಲ್ಲಿ ಯಾರಿಗಾದರೂ ಸಾಲ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗೆ ಸಾಲ ವನ್ನೇನಾದರೂ ಕೊಟ್ಟಿದ್ದರೆ ಅದು ವಸೂಲಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೊಟ್ಟಿರತಕ್ಕ ಸಾಲ ವಸೂಲಾಗಿಯೇ ಆಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತೆಂಗಿನಕೋಟ, ಅಡಕೆ ತೋಟಗಳಿಗೂ ಈ ಸಬ್‌ಸಿಡಿಯನ್ನು ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅವುಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವ ಹಾಗಿದ್ದರೆ ಅವುಗಳಿಗೂ ಕೊಡಲಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹಾಗೆ ಯಾವ ಆಹಾರಧಾನ್ಯಗಳನ್ನೂ ಬೆಳೆಯುದಿದ್ದಾಗ್ಗೂ ಅವುಗಳಿಗೆ ಸಬ್‌ಸಿಡಿ ಕೊಟ್ಟಿರತಕ್ಕ ಅಂಶ ತಮ್ಮ ಗಮನಕ್ಕೆ ಬಂದಿಸೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ತಾವು ಇಲ್ಲಿ ನೂಚಿಸಿರತಕ್ಕ incomplete 3,044 ಬಾವಿಗಳನ್ನು ಜಿಲ್ಲಾವಾರಾಗಿ ತಿಳಿಸಲು ಸಾಧ್ಯವಿದೆಯೇ ?

Sri H. SIDDAVEERAPPA.—Yes. But I want notice.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ 3044 incomplete ಬಾವಿಗಳ ಕೆಲಸ ಹೇಗೆ ಪೂರೈಸದೆ ಇರಲು ಕಾರಣಗಳೇನೆಂಬುದನ್ನು ತಾವು ತನಿಖೆಮಾಡಿ ನೋಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಈಗ ಅವರಿಗೆ ಕೊಡುತ್ತಿರುವ ಸಬ್‌ಸಿಡಿ ಕೇವಲ 250 ರೂಪಾಯಿಗಳು ಮಾತ್ರ, ಈ ಮೊಬಲಗಿನಿಂದ ಬಾವಿಯ ಕೆಲಸದಲ್ಲಿ ನಾಲ್ಕನೇ ಒಂದುಭಾಗ ಕೂಡ ಈ ಮೊಬಲಗಿನಿಂದ ಆಗುವುದಿಲ್ಲವೆಂದು ಹೇಳಿ ಅನೇಕರು ಹಣವನ್ನೇ ತೆಗೆದುಕೊಳ್ಳದೆ ಹಾಗೆಯೇ ಕೈಬಿಟ್ಟುಬಿಟ್ಟಿದ್ದಾರೆ. ಆದ್ದರಿಂದ ಕೆಲಸ ನಿಧಾನವಾಗುತ್ತಿದೆ. ಇತ್ತೀಚೆಗೆ ನಾವು ಕೇಂದ್ರಕ್ಕೆ ಇನ್ನೂ ಹೆಚ್ಚಿನ ಗ್ಯಾರಂಟಿನ್ನು ಕೊಡಬೇಕೆಂದು ಶಿಫಾರ್ಸು ಮಾಡಿರುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗೆ ಆ ಮೊಬಲಗು ಹೆಚ್ಚಿಗೆ ಆದ ಪಕ್ಷದಲ್ಲಿ ತಾವು ಅದಕ್ಕೆ ರಿಟ್ರಾಸ್ಪೆಕ್ಟೀವ್ ಎಫೆಕ್ಟ್‌ನಲ್ಲಿ ಜಾರಿಗೆ ಕೊಡುತ್ತೀರಾ ?

Sri H. SIDDAVEERAPPA.—I cannot say that.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇವುಗಳನ್ನು ಪೂರ್ತಿ ಮಾಡುವುದಕ್ಕೆ ಅಧಿಕಾರಿಗಳನ್ನು ತೆಗೆದುಕೊಂಡು ತಕ್ಕ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಾನಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ. ಈಗಿನ ರೂಲ್ಸ್ ಪ್ರಕಾರ ಎಷ್ಟು ಕೊಡಬೇಕೋ ಅಷ್ಟು ಕೊಡುತ್ತಾರೆ.

ಶ್ರೀ ವಿ. ಮಸಿಯಪ್ಪ.—ಸಬ್ಸಿಡಿ ಹಣ ಕೊಡುವುದರಲ್ಲಿ ಇಂಥಿಂಥ ಪ್ರದೇಶಗಳಿಗೇ ಕೊಡುತ್ತೇವೆಂದು ನಿಗದಿ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದೇನೂ ಇಲ್ಲ.

ಶ್ರೀ ವಿ. ಮಸಿಯಪ್ಪ.—ವಾಣೀವಿಲಾಸ ಸಾಗರದ ಅಚ್ಚುಕಟ್ಟು ಪ್ರದೇಶದಲ್ಲಿ ಬರಬಹುದಾದ ಖುಷ್ಕಿ ಜಮೀನಿನಲ್ಲಿ ಟೂಬ್ ಬಾವಿಗಳನ್ನು ಹಾಕಿ ಸಾಗುವಳಿ ಮಾಡುವುದಕ್ಕೆ ಕೇಳಿದರೆ ಅಲ್ಲಿಗೂ ಸಹಾಯ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲೆಲ್ಲಿ ಈ ಬಾವಿಗಳನ್ನು ಹಾಕಿದರೆ ಅನುಕೂಲವಾಗುತ್ತದೆಯೋ ಅಲ್ಲೆಲ್ಲಾ ಕೊಡುತ್ತೇವೆ.

Wherever irrigation facilities can be had, we will do it ; but probably in the case of Vani Vilas Sagar, by way of prudence they might have given wells in a place where irrigation facilities are not readily available.

ಶ್ರೀ ವಿ. ಮಸಿಯಪ್ಪ.—ಅಲ್ಲಿ ಖುಷ್ಕಿ ಜಮೀನುಗಳಲ್ಲಿ 3 ಎಕರೆ-5 ಎಕರೆಯಷ್ಟು ತರೀ ಸಾಗುವಳಿಗೆ ಏರ್ಪಾಡು ಮಾಡುತ್ತೇವೆಂದರೂ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆಂದು ಹೇಳಬೇಕಾದರೆ ಎಲ್ಲಿಗೂ ಕೊಡಕೂಡದೆಂದು ಮಾಡಿಲ್ಲ.

ಶ್ರೀ ವಿ. ಮಸಿಯಪ್ಪ.—ಹಿಂದೆ ಬಾವಿ ತೋಡಿಸಲಕ್ಕೆ 500 ರೂಪಾಯಿಗಳನ್ನು ಕೊಡುತ್ತಿದ್ದು, ಬಾವಿ ಪ್ರಾರಂಭಿಸಿದಾಗ ಅದರಲ್ಲಿ ಅರ್ಧ ಭಾಗ ಮಾತ್ರ ಕೊಟ್ಟು, ವಿುಕ್ಕರ್ಧವನ್ನು ಕೆಲಸ ಅರ್ಧ ಆದ ಮೇಲೆ ಕೊಡಬೇಕೆಂದು ಹೇಳಿ ನಿಲ್ಲಿಸಿದ್ದರೆ, ಈಗ ಆ ಇನ್ನರ್ಧ ಹಣವನ್ನು ಕೊಡಿಸಿಕೊಡುತ್ತೀರಾ ?

Sri H. SIDDAVEERAPPA.—So far as the amount is concerned, the Government of India have promised to give us as much money as is necessary for this useful work. The only point is, agriculturists are not coming forward to take it on the plea that the amount given is wholly inadequate.

ಶ್ರೀ ವಿ. ಮಸಿಯಪ್ಪ.—ಹಿಂದೆ ಒಂದೊಂದು instalmentಗಳನ್ನು ಮಾತ್ರ ತೆಗೆದುಕೊಂಡು ಅರ್ಧ ಕೆಲಸ ಮಾಡಿ ಇನ್ನರ್ಧ instalment ಕೇಳುವ ಹೊತ್ತಿಗೆ ಈ ಹೊಸ ಆರ್ಡರ್ ಬಂದು, ಇನ್ನೊಂದು instalment ಕೊಡದೆ ಬಾವಿ ನಿಂತುಹೋಗಿದ್ದರೆ, ಈಗ ಆ ಇನ್ನೊಂದು instalment ಕೊಟ್ಟು ಪೂರೈಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಮಾಡುವುದಕ್ಕೆ ಸಾಧ್ಯವಿದ್ದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಸಿ ಆಂಜನೇಯರೆಡ್ಡಿ.—ಸಬ್ಸಿಡಿಯನ್ನು ಜಾಸ್ತಿ ಮಾಡತಕ್ಕ ಅಭಿಪ್ರಾಯವೇನಾದರೂ ಸರ್ಕಾರದಲ್ಲಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಉತ್ತರ ಹೇಳಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಬಾವಿಗಳ ಮೇಲೆ 750 ರೂಪಾಯಿಗಳ ಸಾಲ ಕೊಡುತ್ತೇವೆಂದು ಹೇಳಿದಿರಿ. ಅದೀಗ ಜಾರಿಯಲ್ಲಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಜಾರಿಯಲ್ಲಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ತಾಲ್ಲೂಕು ಕಛೇರಿಯಲ್ಲಿ ಹೋಗಿ ಅಮಲ್ದಾರರನ್ನು ಕೇಳಿದರೆ ಅವರು ಅಲಾಟ್‌ಮೆಂಟೇ ಬಂದಿಲ್ಲವೆಂದು ಹೇಳುತ್ತಿದ್ದಾರೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಗೊತ್ತಿಲ್ಲ; ನಮ್ಮಲ್ಲಿ ಅದಕ್ಕಾಗಿ Sufficient funds ಕೊಟ್ಟಿದೆ. ಹಿಂದಿನ ವರ್ಷದ ಬಜೆಟ್ಟನ್ನು ನೋಡಿದರೇ ಇದಕ್ಕೆ ಎಷ್ಟು ಅಲಾಟ್‌ಮೆಂಟ್ ಮಾಡಿದೆಯೋ ಅಷ್ಟೂ ಖರ್ಚಾಗಿಲ್ಲವೆಂಬುದು ಕಂಡುಬರುತ್ತದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಸಬ್ಸಿಡಿ ಹಣವನ್ನು ಅರ್ಜಿಹಾಕಿದ ಒಂದು ತಿಂಗಳೊಳಗಾಗಿಯೇ ಕೊಡುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಬಾವಿಗಳಿಗೆ 750 ರೂಪಾಯಿಗಳ ಪರಮಾವಧಿ ಸಾಲವನ್ನು ಕೊಡುವಂತೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಜಿ. ನಾರಾಯಣಗೌಡ.—ಕೋಲಾರ ಜಿಲ್ಲೆಯಲ್ಲಿ ಒಂದೊಂದು ಬಾವಿಗೆ 3,000 ರೂಪಾಯಿಗಳ ಮೇಲೆಯೂ ಖರ್ಚಾಗುತ್ತದೆಂಬುದು ಗೊತ್ತೇ ?

ಶ್ರೀ ಎಚ್. ಸಿದ್ದವೀರಪ್ಪ.—ಒಟ್ಟಿನಲ್ಲಿ ನಮ್ಮ ಸಂಸ್ಥಾನದಲ್ಲಿ ಬಾವಿಗಳಿಗೆ ಹೆಚ್ಚಿಗೆ ಖರ್ಚಾಗುತ್ತದೆಂದು ನಮ್ಮ ಗಮನಕ್ಕೆ ಬಂದಿದೆ. ಈ ವಿಚಾರದಲ್ಲಿ ಹೆಚ್ಚಿಗೆ ಹಣ ಕೊಡಬೇಕೆಂದು ಇಂಡಿಯಾ ಸರ್ಕಾರದವರನ್ನು ಕೇಳುತ್ತಿದ್ದೇವೆ. ಇದನ್ನು ಕೇಳಿ, ರಾಮಮೂರ್ತಿ ಕಮಿಟಿಯವರೂ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ, ಈ 750 ರೂಪಾಯಿಗಳನ್ನು ಕೊಡುವುದನ್ನು ಹೆಚ್ಚು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಇಂಡಿಯಾ ಸರ್ಕಾರದವರ ಸ್ಕೀಂ ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ನಾವು ನಮ್ಮ ಪ್ರದೇಶದಲ್ಲಿ ಈ ರೀತಿ ಪರಿಸ್ಥಿತಿಯಿದೆ, ನೀವು ಕೊಡತಕ್ಕ ಹಣ ಸಾಲದು ಎಂದು ಅವರ ಗಮನಕ್ಕೆ ತಂದಿದ್ದೇವೆ. ಹಾಗೂ ಮತ್ತೆ ಮತ್ತೆ ಈ ವಿಷಯವನ್ನು pursue ಮಾಡುತ್ತಿದ್ದೇವೆ. ಅವರು ಕೊಡಬಹುದೆಂಬ ನಿರೀಕ್ಷಣೆಯಿದೆ.

And also my colleague says that Ramamurthi Committee has recommended to the Government of India.

ಶ್ರೀ ಬಿ. ಹುಚ್ಚೇಗೌಡ.—ತಾವಿಲ್ಲಿ ಕೊಟ್ಟಿರುವ ಲೆಕ್ಕಗಳನ್ನು ನೋಡಿದರೆ, ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಒಂದೊಂದು ರೇಟಿನಂತೆ ಬಾವಿಗಳಿಗೆ ಸಬ್ಸಿಡಿ ಕೊಟ್ಟಿರುವಂತೆ ಕಾಣುತ್ತದೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ 1,333 ಬಾವಿಗಳಿಗೆ ಒಟ್ಟು 7 ಲಕ್ಷದ 40 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಚಿತ್ರದುರ್ಗ ಜಿಲ್ಲೆಯಲ್ಲಿ 373 ಬಾವಿಗಳಿಗೆ 2,73,737 ರೂಪಾಯಿಗಳನ್ನು ಕೊಟ್ಟಿದ್ದೀರಿ, ತುಮಕೂರು ಡಿಸ್ಟ್ರಿಕ್ಟಿನಲ್ಲಿ 435 ಬಾವಿಗಳಿಗೆ 1,53,104 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಇದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ತಾವು ಒಂದೊಂದು ಬಾವಿಗೆ 250 ರೂಪಾಯಿಗಳನ್ನು ಕೊಡುವುದಾಗಿ ಹೇಳಿದ್ದೀರಿ. ತುಮಕೂರಿನ ವಿಷಯದಲ್ಲೇನೋ ತಾವು ಇದುವರೆಗೆ ಕೊಟ್ಟಿರುವ ಹಣ ಸರಿಹೋಗುತ್ತದೆ. ಆದರೆ ಇನ್ನು ಕೆಲವು ಡಿಸ್ಟ್ರಿಕ್ಟುಗಳಿಗೆ ಕೊಟ್ಟಿರುವ ಹಣ ನೋಡಿದರೆ ಕೆಲವು ಕಡೆ ಬಾವಿಯೊಂದಕ್ಕೆ 800 ರೂಪಾಯಿ ಬೀಳುತ್ತದೆ, ಇನ್ನು ಕೆಲವು ಕಡೆ ಇನ್ನೂ ಕಡಮೆ ಬೀಳುತ್ತದೆ. ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.— ಹಿಂದೆ ಕೆಲವು ದಿವಸ ಬಾವಿಯೊಂದಕ್ಕೆ 1,000 ರೂಪಾಯಿಗಳನ್ನು ಕೊಡುತ್ತಿತ್ತು. 1949-50ರಲ್ಲಿ ಇದೇ ರೀತಿ ಕೊಟ್ಟಿದೆ. 500 ರೂಪಾಯಿಗಳೆಂದೂ ಬಹಳ ದಿವಸ ಇತ್ತು. ಬಾವಿಗೆ 250 ರೂಪಾಯಿಗಳೆಂದು ಮಾಡಿರುವುದು ಇತ್ತೀಚೆಗೆ.

ಶ್ರೀ ಬಿ. ಹುಚ್ಚೇಗೌಡ.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಬಾವಿಗೆ ಸಬ್ಸಿಡಿ ಕೇಳಿದ್ದಾಗಲೆಲ್ಲಾ ನಿರಾಕರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.— ಬಾವಿಗಳಿಗೆ ಸಬ್ಸಿಡಿ ಕೊಡುವ ವಿಷಯದಲ್ಲಿ ಹಾಗೆ ಹೇಳುವುದಕ್ಕಾಗುವುದಿಲ್ಲ. ಅದಷ್ಟುಮಟ್ಟಿಗೆ ಕೊಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.— ಹಾಗಾಗಿಲ್ಲ. ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಬಾವಿಗಳಿಂದ ವ್ಯವಸಾಯ ಮಾಡುವುದೇ ಜಾಸ್ತಿಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.— ಬಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಆ ಡಿಸ್ಟ್ರಿಕ್ಟುಗಳಲ್ಲಿ ಅರ್ಜಿಗಳು ಎಷ್ಟೆಷ್ಟು ಬಾಕಿ ಇವೆಯೆಂಬುದನ್ನು ತರಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.— ನೋಟೀಸ್ ಬೇಕು. ಆದರೂ ಇಷ್ಟು ಹೇಳುತ್ತೇನೆ, ಹಣ ಎಷ್ಟು ಒದಗಿಸಿದ್ದೀವೋ ಅಷ್ಟೂ ಕೊಡುವುದಕ್ಕೆ ಯಾವಾಗಲೂ ತಯಾರಾಗಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.— ಅಷ್ಟೂ ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.— ಬಂದಿಲ್ಲ; ವಿಚಾರಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ.— ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಾವಿಗಳಿಗಾಗಿ 350, 350, 600 ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದಕ್ಕೆ ಕಾರಣವೇನು? ಇದಕ್ಕೆ ಕೊಟ್ಟಿರುವ ಹಣ ಬಹಳ ಕಡಮೆಯಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಅನುಕೂಲಸ್ಥರು ಹೆಚ್ಚಾಗಿದ್ದು ಯಾರೂ ಸಾಲವೇ ಕೇಳಲಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಸಿ. ಬಸಪ್ಪ.— 1949-50, 1950-51 ಮತ್ತು 1951-52ರಲ್ಲಿ ಏನೂ ಬಾಗಿಗೇ ಇಲ್ಲದೆ ಮುಂಗಡವಾಗಿ ಏನಾದರೂ ಹಣ ಕೊಟ್ಟಿದ್ದನ್ನು ಈ ರೀತಿ ತೋರಿಸಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.— ಹಿಂದೆ ತೆಗೆದುಕೊಂಡಿರುವುದು ಇರುವುದರಿಂದಲೇ ಇಲ್ಲಿ ತೋರಿಸಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— 3044 ಬಾವಿಗಳು ಪೂರ್ತಿಯಾಗದೆ ಉಳಿದಿವೆಯೆಂದು ಇಲ್ಲಿ ಹೇಳಿದ್ದೀರಲ್ಲಾ, ಇವುಗಳ ಪೈಕಿ, ಬಾವಿ ತೆಗೆಸುವ ಉದ್ದೇಶವಿಲ್ಲದಿರುವವರು ಯಾರಾದರೂ ಇದ್ದಾರೆಯೇ ಎಂಬುದನ್ನು ತನಿಖೆ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಹೇಳಿದ್ದೇನೆ ; ತನಿಖೆ ಮಾಡುತ್ತಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಸಬ್ಸಿಡಿ ತೆಗೆದುಕೊಂಡಿರುವವರು ಬಾವಿಗಳನ್ನು ಇಷ್ಟು ವರ್ಷದಲ್ಲೇ ಪೂರ್ತಿ ಮಾಡಬೇಕೆಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.— ಅವೆಲ್ಲಾ ರೂಲ್ಸ್ ಗಳಲ್ಲವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ಆ ಅವಧಿಯಲ್ಲಿ ಮಾಡದಿರುವವರಿಂದ ಹಣ ವಾಪಸು ತೆಗೆದುಕೊಳ್ಳಬೇಕೆಂದು ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಆ ರೀತಿ ಮಾಡದೆ ಇದ್ದರೆ ವಸೂಲು ಮಾಡುವುದಕ್ಕೆ ನೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬಾವಿ ತೆಗೆಸಿದಮೇಲೆ ಗ್ಯಾರಂಟಿ ಕೊಡುತ್ತೀರಾ ಅಥವಾ ಮೊದಲೇ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.— ಅರ್ಧ ಕೆಲಸ ಆಗಿರಬೇಕು.

ಶ್ರೀ ಡಿ. ದೇವರಾಜ ಅರಸ್.— ಡಿಸ್ಟ್ರಿಕ್ಟ್‌ವಾರು ನಬ್ಬಿಡಿ ಹಂಚುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲೆಲ್ಲಿ ಕೇಳಿದ್ದಾರೋ ಎಲ್ಲೆಲ್ಲಿ ಆವಶ್ಯಕತೆಯಿದೆಯೋ ಅಲ್ಲೆಲ್ಲಾ ನೋಡಿ ಕೊಂಡು ಕೊಡುತ್ತಿದೆ.

ಶ್ರೀ ಡಿ. ದೇವರಾಜ ಅರಸ್.— ಕಡಮೆ ಸಬ್ಸಿಡಿ ಕೊಟ್ಟಿರುವ ಕಡೆ, ಅಲ್ಲಿ ಅವಶ್ಯಕತೆಯಿಲ್ಲವೆಂದು ಕೊಟ್ಟಿಲ್ಲವೇ ಅಥವಾ ಅಲ್ಲಿನವರು ಕೇಳಿಲ್ಲವೆಂದೇ ?

ಶ್ರೀ ಎಚ್. ಸಿದ್ದವೀರಪ್ಪ.— ಕೇಳಿಲ್ಲವೆಂದು ಭಾವಿಸ ಬಹುದು.

ಶ್ರೀ ಬಿ. ಟಿ.ಕೆಂಪರಾಜ್.— 1952-53ಕ್ಕೆ 67ಬಾವಿ ಗಳನ್ನು ಮಾತ್ರ ಬೆಂಗಳೂರು ಡಿಸ್ಟ್ರಿಕ್ಟಿಗೆ ಕೊಟ್ಟಿದ್ದೀರಲ್ಲಾ, ಹೆಚ್ಚಿಗೆ ಬಾವಿಗಳ ಆವಶ್ಯಕತೆಯಿಲ್ಲವೆಂದು ತಮ್ಮ ಅಭಿಪ್ರಾಯವೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿಯ ಅಭಿಪ್ರಾಯವಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಯಾವ ವಿಧವಾದ irrigation facilities ಇಲ್ಲದಿರುವ ಕಡೆ ಎಷ್ಟು ಬಾವಿಗಳು ಬೇಕೆಂದು ಅಂದಾಜು ಮಾಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.— ಅರ್ಜಿಗಳು ಬಂದಾಗ ಅವುಗಳನ್ನು ಕೊಡುವುದಕ್ಕೆ ತಯಾರಾಗಿದ್ದೇವೆಂದು ಆಗಲೇ ಹೇಳಿದ್ದೇನೆ.

ಶ್ರೀ ಯು. ಎಂ. ಮಾದಪ್ಪ .— Irrigation facilities ಯಾವುವೂ ಇಲ್ಲದಿರುವ ಕಡೆ ಎಲ್ಲೆಲ್ಲ ಬಾವಿಗಳನ್ನು ಕೊಡಬೇಕೆಂದು ನಿರ್ಧರ ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.— ಆ ರೀತಿಯಾಗಿ ಇಂಥ ಪ್ರದೇಶ ಎಂದು ನಿರ್ಧರ ಮಾಡಿಲ್ಲ. ಎಲ್ಲೆಲ್ಲ ಸಾಮಾನ್ಯವಾಗಿ lift irrigation by wells ಮಾಡುವುದಕ್ಕೆ ಅವಕಾಶವಿದೆ, ಅಲ್ಲೆಲ್ಲಾ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.— ಹೆಚ್ಚಿಗೆ ಎಲ್ಲಿ irrigation facilities ಇಲ್ಲ ಎಂಬುದನ್ನು ತಿಳಿದು ಕೊಳ್ಳದೆ ಇದ್ದು facilities ಎಲ್ಲೆಲ್ಲಿ ಹೆಚ್ಚಿಗೆ ಇದೆಯೋ ಅಲ್ಲೇ ಕೊಡುವುದಕ್ಕೆ ಹೊರಟರೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ?

ಶ್ರೀ ಹೆಚ್. ಸಿದ್ದವೀರಪ್ಪ.— ಕೆಲವು ಕಡೆಗಳಲ್ಲಿ sub-soil water ಮೇಲೆಯೇ ಇರುತ್ತದೆ; ಅಂಥ ಕಡೆ ಬಾವಿಗಳನ್ನು ಏರ್ಪಡಿಸುವುದರಿಂದ ಹೆಚ್ಚು ಅನುಕೂಲವಾಗುತ್ತದೆ. ಇನ್ನು ಕೆಲವು ಕಡೆ ಬಾವಿಗಳಿಂದಲೇ ವ್ಯವಸಾಯ ಮಾಡುವ ಪದ್ಧತಿಯಿರುತ್ತದೆ. ಅಂಥ ಕಡೆಯೂ ಕೊಡಬೇಕಾಗುತ್ತದೆ.

12-30 P.M.

ಶ್ರೀ ಯು. ಎಂ. ಮಾದಪ್ಪ.—ಕೆಲವುಕಡೆ ಬಾವಿಗಳಲ್ಲಿ ನೀರು ಬಾರದೇಯಿರುವ ಸಂದರ್ಭಗಳಲ್ಲಿ 'ಬೋರಿಂಗ್' ಮೆಷಿನ್'ನಿಂದ ಬಾವಿ ತೆಗೆಸಿಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಶೀಲನೆ ಮಾಡುತ್ತೇವೆ.

L. A.

Grant of date-grove lands to the Depressed Classes.

Q.—19. Sri T. HANUMAIAH (Hiriyur—Scheduled Castes).—

Will the Government be pleased to state :—

(*a*) whether there is any Government Order to the effect that while disposing of the date-grove in the five districts brought under prohibition preference should be shown to the Depressed Classes, if so, the number and date of the Government Order;

(*b*) the number of applications of the Depressed Classes filed in the five districts (distrct and talukwar information to be furnished) ;

(*c*) the total grant of date-grove lands to the Depressed Classes and other caste Hindus and by public auction ;

(*d*) the extent of date-grove lands granted to each of the individual applicants of Depressed Classes ?

A.—Sri KADIDAL MANJAPPA (Minister for Revenue and Public Works).—

(*a*) Yes. G. O. No. R. 13715-25—L. R. 384-47-4, dated 13th January 1953.

(*b*), (*c*) and (*d*) No reply can be given as the period for which information is required is not furnished.

ಶ್ರೀ ಟಿ. ಹನುಮಯ್ಯ.— ಮಾನ್ಯ ಮಂತ್ರಿಗಳು ಅಧಿಕಾರಕ್ಕೆ ಬಂದಾಗಿನಿಂದ ಇದುವರೆಗೆ ಎಷ್ಟು ಅರ್ಜಿದಾರರಿಗೆ ಜಮೀನು ಕೊಟ್ಟಿದ್ದೀರಿ ?

Sri KADIDAL MANJAPPA.— Sir, he has not mentioned the period for which he wants information and I am not in a position to give the same.

ಶ್ರೀ ಟಿ. ಹನುಮಯ್ಯ.—ಪಾನನಿರೋಧವನ್ನು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಜಾರಿಮಾಡಿದ್ದೀರಿ.....

ಅಧ್ಯಕ್ಷರು.—ನೀವು ತಾರೀಕು ಅವಧಿ ಏನನ್ನೂ ಹಾಕಲಿಲ್ಲ, ನಿಮ್ಮ ಪ್ರಶ್ನೆಯಲ್ಲಿ.

ಶ್ರೀ ಟಿ. ಹನುಮಯ್ಯ.—13-1-1953ರಲ್ಲಿ ಒಂದು ಸರ್ಕಾರಿ ಆಜ್ಞೆ ಮಾಡಿರುವುದಾಗಿ ಹೇಳಿದೆ, ಅದಕ್ಕೆ ಮುಂಚೆ ಈ ವಿಚಾರದಲ್ಲಿ ಯಾವುದೂ ಸರ್ಕಾರಿ ಆಜ್ಞೆ ಇರಲಿಲ್ಲವೆ ?